ಇರುವುದೊಂದೆ ಭೂಮಿ, ಆ ತಾಯಿಗೆ ಕೋಟಿ ಕೋಟಿ ಪ್ರಭೇದಗಳ ಮಕ್ಕಳು. ಅಸಂಖ್ಯ ಜೀವರಾಶಿಯಲ್ಲಿ ಒಬ್ಬನಾದ ಮನುಷ್ಯ, ಎಲ್ಲರಿಗೂ ಇರುವ ಭೂಮಿಯನ್ನು ತನಗೆ ಮಾತ್ರ ಎಂದು ಬಗೆದ ಕಾರಣದಿಂದಾಗಿ ಕೋಟ್ಯಂತರ ಜೀವಿಪ್ರಭೇದಗಳು ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡಿವೆ. ಉಳಿವಿನ ಪ್ರತಿ ಹೆಜ್ಜೆಗೂ ಪ್ರಕೃತಿಯನ್ನೇ ಅವಲಂಬಿಸಿದ್ದರೂ ನಿಂತ ಕೊಂಬೆಯನ್ನೇ ಕಡಿಯುವ ದುಸ್ಸಾಹಸ ಮನುಷ್ಯನದು. ಜೀವಿವೈವಿಧ್ಯದ ರಕ್ಷಣೆ ಎಂದರೆ ವಾಸ್ತವವಾಗಿ ನಮ್ಮ ಅಸ್ತಿತ್ವವನ್ನು ನಾವು ಉಳಿಸಿಕೊಳ್ಳುವ ಕಸರತ್ತು. ‘ಬನ್ನಿ, ಜೀವಿವೈವಿಧ್ಯವನ್ನು ಉಳಿಸೋಣ’ ಎನ್ನುವ ಬದಲು, ‘ಬನ್ನಿ, ಇನ್ನೂ ನಾಲ್ಕು ಕಾಲ ಭೂಮಿಯಲ್ಲಿ ಉಳಿಯೋಣ’ ಎನ್ನುವುದೇ ನಮ್ಮ ನಿಜವಾದ ಘೋಷಣೆಯಾಗಬೇಕು ಎಂದು ಕಿವಿಮಾತು ಹೇಳುವ ಈ ಬರಹ, ಮೇ 22ರ ‘ಅಂತರರಾಷ್ಟ್ರೀಯ ಜೀವಿವೈವಿಧ್ಯ ದಿನ’ದ ವಿಶೇಷ. ಮನುಕುಲದ ಕಥೆ–ವ್ಯಥೆಯ ನಿರೂಪಣೆಯ ಜೊತೆಗೆ ನಾಳೆಗಳನ್ನು ಜತನವಾಗಿರಿಸಿಕೊಳ್ಳಲು ವಹಿಸಬೇಕಾದ ಎಚ್ಚರಿಕೆಗಳನ್ನೂ ಮನದಟ್ಟು ಮಾಡಿಸುವ ಈ ಬರಹ – ಎಲ್ಲ ವಯೋಮಾನದವರೂ, ವಿಶೇಷವಾಗಿ ಮಕ್ಕಳು ಓದಲೇಬೇಕಾದುದು.

■ **ಟಿ.ಆರ್. ಅನಂತರಾಮು**

# ನಮ್ಮ ಉಳಿವಿಗಾಗಿ ಜೀವಿಗಳ ಉಳಿಸೋಣ

